ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 441
ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ .ಪಿ.ಎಂ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 16.12.2021
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲ ಚಟುವಟಿಕೆಗಳಲ್ಲಿ ನಗರಕ್ಕೆ ಅಭಿವೃದ್ಧಿ ನಕ್ಷೆ ತಯಾರಿಸುವುದು ಪ್ರಪ್ರಥವಾಗಿದ್ದು, 2015 ಸಾಲಿನವರೆಗೆ ಬೆಂಗಳೂರು ನಗರದ ಅಭಿವೃದ್ಧಿಯ ರೂಪು ರೇಷೆಗಳನ್ನು ಅಂದಾಜಿಸಿ ಸುಮಾರು 20 ವರ್ಷಗಳ ಹಿಂದೆ ತಯಾರಿಸಲಾಗಿದ್ದ ಪರಿಷ್ಕೃತ ಮಹಾ ಯೋಜನೆ 2015 Revised Master Plan-2015 (RMP-2015) ರ ಅವಧಿ ಮುಗಿದು ಆರು ವರ್ಷಗಳೇ ಗತಿಸಿದ್ದರೂ ಬೆಂಗಳೂರು ನಗರಕ್ಕೆ ಒಂದು ಸಮಗ್ರ ಅಭಿವೃದ್ಧಿ ಯೋಜನೆ ನಕ್ಷೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 4-ಎ(1) ಅಡಿಯಲ್ಲಿ ಅಧಿಸೂಚನೆ ಸಂಖ್ಯೆ PLM 42 MNP 65, ದಿನಾಂಕ:01/11/1965 ರಲ್ಲಿ 500 ಚ.ಕೀ.ಮೀ ಪ್ರದೇಶವನ್ನು ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ. (Local Planning Area of Bangalore). ಅಧಿಸೂಚನೆ ಸಂಖ್ಯೆ HUD 496 TTP 83, Dated: 13/03/1984 ರಲ್ಲಿ ಯೋಜನಾ ಪ್ರದೇಶದ ವ್ಯಾಪ್ತಿಯನ್ನು 1279 ಚ.ಕೀ.ಮೀ ಗೆ ವಿಸ್ತರಿಸಿ ಪರಿಷ್ಕೃತ ವ್ಯಾಪ್ತಿಯನ್ನು ಬೆಂಗಳೂರು ನಗರ ಯೋಜನಾ ಪ್ರದೇಶ (Bangalore City Planning Area) ಎಂದು ಘೋಷಿಸಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸರ್ಕಾರದಿಂದ ದಿನಾಂಕ 25/06/2007 ರಂದು ಪರಿಷ್ಕೃತ ಮಹಾಯೋಜನೆ-2015 ಅನುಮೋದನೆಯಾಗಿರುತ್ತದೆ. ಪ್ರಸ್ತುತ ಪರಿಷ್ಕರಣೆ ಕಾರ್ಯವು ಚಾಲ್ತಿಯಲ್ಲಿರುತ್ತದೆ.
ಆ	ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸರ್ಕಾರದಿಂದ/ಖಾಸಗಿಯವರಿಂದ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಯೋಜನೆಗಳು ವಸತಿ / ಸಮುಚ್ಚಯ/ ಬಡಾವಣೆ ನಿರ್ಮಾಣ ಇತ್ಯಾದಿ ಯೋಜನೆಗಳಿಗೆ ಅನುಮೋದನೆ ನೀಡಲು ಆರು ವರ್ಷದ ಹಿಂದೆಯೇ ಅವಧಿ ಮುಗಿದಿರುವ ಆರ್.ಎಂ.ಪಿ-2015ನ್ನೇ ಆಧಾರವಾಗಿ ಪರಿಗಣಿಸಲಾಗುತ್ತಿರುವುದರಿಂದ ಒಟ್ಟಾರೆ ನಗರದ ಅಭಿವೃದ್ಧಿಯ ಮೇಲೆ ಅನಪೇಕ್ಷಣೀಯ ಪರಿಣಾಮ ಉಂಟಾಗುವ ಸಾಧ್ಯತೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಚಾಲ್ತಿಯಲ್ಲಿರುವ RMP-2015 ಕ್ಕೆ ದಿನಾಂಕ: 25.06.2007 ರಂದು ಸರ್ಕಾರದಿಂದ ಅನುಮೋದನೆಯಾಗಿದ್ದು, ಕೆಟಿಸಿಪಿ ಕಾಯ್ದೆ 1961 ರ ಅವಕಾಶಗಳಂತೆ ಕನಿಷ್ಟ 10 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕಾಗಿರುತ್ತದೆ. RMP-2015 ಅನ್ನು ಪರಿಷ್ಕರಿಸುವ ಕಾರ್ಯವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲಾಗಿದ್ದು, ಇದರ ಭಾಗವಾಗಿ ಸರ್ಕಾರದಿಂದ ಪರಿಷ್ಕೃತ ಮಹಾಯೋಜನೆ-2031 ಕ್ಕೆ ದಿನಾಂಕ:22/11/2017 ರಂದು ತಾತ್ಕಾಲಿಕ ಅನುಮೋದನೆ ನೀಡಲಾಗಿತ್ತು. ದಿನಾಂಕ 22/06/2020 ರ ಸರ್ಕಾರದ ಆದೇಶದಲ್ಲಿ ತಾತ್ಕಾಲಿಕ ಅನುಮೋದನೆ ಹಿಂಪಡೆಯಲಾಗಿದೆ. ಅದರಂತೆ, RMP-2015 ಅನ್ನು ಪರಿಷ್ಕರಿಸುವ ಕಾರ್ಯ ಪ್ರಗತಿಯಲ್ಲಿದೆ.

..2ಕ್ಕೆ

ಇ	ಹಾಗಿದ್ದಲ್ಲಿ, ಬೆಂಗಳೂರು ನಗರದ ಬೆಳವಣಿಗೆಯು ವ್ಯವಸ್ಥಿತ ರೀತಿಯಲ್ಲಿ ಆಗುವಂತೆ ಮಾಡಲು ಅವಶ್ಯಕವಾದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ದಿನಾಂಕ: 22.06.2020 ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿದ್ಧಪಡಿಸಿ ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಿದ್ದ ಪರಿಷ್ಕೃತ ಮಹಾಯೋಜನೆ-2031 (RMP-2031) ಅನ್ನು ಹಿಂಪಡೆಯಲಾಗಿದ್ದು, ಹೊಸದಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ. ಅದರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪರಿಷ್ಕೃತ ಮಹಾಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಈ ಸಂಬಂಧ ಹೊಸದಾಗಿ ಟೆಂಡರ್ ಕರೆದು ಮಹಾಯೋಜನೆ ಸಿದ್ಧಪಡಿಸುವಂತೆ ಸರ್ಕಾರದ ಪತ್ರ ದಿನಾಂಕ:18.08.2021 ರಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಸರ್ಕಾರದ ಸ್ವಾಮ್ಯದ ಸಂಸ್ಥೆಯಾದ TECSOK ರವರನ್ನು Tender Document ತಯಾರಿಸಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸಲಹಾ ಸಂಸ್ಥೆಯೆಂದು ನೇಮಿಸಿಕೊಳ್ಳಲಾಗಿದೆ. ಸದರಿ ಸಂಸ್ಥೆಯವರು ಕರಡು Tender Document ತಯಾರಿಸಿ ನೀಡಿದ್ದು, ವಿವಿಧ Stake Holders ಗಳಾದ BBMP, BMRCL, DULT ಮತ್ತು ಇತರರಿಗೆ ಸಲಹೆಗಳನ್ನು ಸೂಚನೆಗಳನ್ನು ಕೋರಿ ಕಳುಹಿಸಲಾಗಿದ್ದು, ಸದರಿ ಸಲಹಾ ಸಂಸ್ಥೆಗಳಿಂದ ಸ್ವೀಕೃತವಾದ ಸಲಹೆ / ಸೂಚನೆಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು Tender Document ಅನ್ನು ಸಿದ್ಧಪಡಿಸಲಾಗಿದೆ. ಸದರಿ Tender Document ರಂತೆ ಟೆಂಡರ್ ಕರೆಯಲು ಅಧಿಸೂಚನೆ ಹೊರಡಿಸಬೇಕಾಗಿದ್ದು, ಪ್ರಸ್ತುತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನೀತಿ ಸಂಹಿತೆ ಮುಗಿದ ತಕ್ಷಣ ಟೆಂಡರ್ ಕರೆಯಲಾಗುವುದು. ಟೆಂಡರ್ ಪ್ರಕ್ರಿಯೆ ಮೂಲಕ ಮಹಾಯೋಜನೆ ತಯಾರಿಕೆಗೆ ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡು ಆದಷ್ಟು ಶೀಘ್ರದಲ್ಲಿ ಪರಿಷ್ಕೃತ ಮಹಾಯೋಜನೆ-2041 ಅನ್ನು ತಯಾರಿಸಲು ಕ್ರಮವಹಿಸಲಾಗುವುದು.

ನಅಇ 269 ಬೆಂಆಸೇ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ